ಬನವಾಸಿ ವೆಂಕಟೇಶ ದೀಕ್ಷಿತ್
ಕಲೆ: ಡಿ.ಕೆ. ರಮೇಶ್

# ಅನಾಗತ



ಕಾಶವ್ವ ಚಪ್ಪಡಿಕಲ್ಲಿನ ಮೇಲೆ ಕಾಲುಮಡಿಸಿ ಕುಳಿತ ಮಗಳ ಕೂದಲಿಗೆ ಸೀಗೇಪುಡಿಯ ನೀರನ್ನು ಬೊಗಸೆಯಲ್ಲಿ ಮೊಗೆದುಕೊಂಡು ಸುರುವಿ ಗಸಗಸನೆ ನೊರೆಬರುವಂತೆ ತಿಕ್ಕತೊಡಗಿದಳು. ಸೂರ್ಯನನ್ನು ಕಳಿಸಿ ಇಳೆಗೆ ಗುಳೇ ಬಂದ ನಿಶೆ ಊರ ಮೇಲೆಲ್ಲ ಕಾಡಿಗೆಕಪ್ಪು ಚಾದರವನ್ನು ಹಾಸಿ ಹೊದೆಸುತ್ತಿರುವ ಹೊತ್ತಿನಲ್ಲಿ, ಕೇರಿಯ ಕೊನೇ ಮನೆಯ ಅಂಗಳದ ಬೇವಿನಮರ, ಅದಕ್ಕೆ ಕಟ್ಟಿದ ಗೋಣಿತಾಟು, ಗೊಬ್ಬರದ ಪ್ಲಾಸ್ಟಿಕ್ ಚೀಲಗಳು ಸೇರಿ ಮರೆಯನ್ನು ಸೃಷ್ಟಿಸಿದ ಸ್ನಾನದ ಮನೆಯ ಖಾಸಗಿ ಜಾಗಕ್ಕೂ ಅಮಾಸೆಯ ನಕ್ಷತ್ರಗಳ ಮಿನುಗು, ಓಣಿಯ ಪಂಚಾಯ್ತಿ ಲೈಟುಕಂಬದ ಮಬ್ಬು ಬೆಳಕು ಇಣುಕಿ ನೋಡುವಲ್ಲಿ ಬಿಸಿನೀರನ್ನು ಮಗ್ಗಿನಲ್ಲಿ ಮೊಗೆದು ಮೊಗೆದು ತಲೆ ಭುಜದಮೇಲೆ ಸುರುವುತ್ತಿರುವ ಅವ್ವ ಯಾಕೋ ಸಹಜವಾಗಿಲ್ಲ ಅನಿಸತೊಡಗಿತ್ತು ಪದ್ಮಾವತಿಗೆ. ಮಣ್ಣ ಹರಿವೆಯಲ್ಲಿ ನೀರು ಜಾಸ್ತಿಯೆ ಬಿಸಿಯಾಗಿತ್ತು. 'ಸಾಕು ತಗಳವ್ವ... ಅದೆಷ್ಟರ ಜಳಕ ಮಾಡತಿ? ಮತ್ತ ಬೆವ್ರು ಬರಾದು ಇದ್ದಿದ್ದ...' ಅಂತ ತಡೆಯುವ ಕಾಶವ್ವನ ಉದ್ದೇಶದಲ್ಲಿ ಕಟ್ಟಿಗೆ ಖರ್ಚು ಉಳಿಸುವ ಒತ್ತಡವಲ್ಲದೆ ಮಕ್ಕಳ ಬಗ್ಗೆ ತಾತ್ಸಾರವಲ್ಲ ಅನ್ನುವುದು ತಿಳಿಯದ್ದಲ್ಲ. ಉಳಿದ ದಿನ ತಣ್ಣೀರಲ್ಲೆ ಮುಗಿಯುವ ಸ್ನಾನಕ್ಕೆ ತಲೆಗೆ ಎಣ್ಣೆ ಹಚ್ಚಿದ ದಿನ ಬಿಸಿನೀರು ಬೇಕು. ಹಿರಿಯರಿಂದ ಬಳುವಳಿಯಾಗಿ ಸಿಕ್ಕ ಮಕ್ಕಳ ಸೊಂಪಾದ ಕೂದಲಿಗೆ ವಾರಕ್ಕೊಮ್ಮೆಯಾದರೂ ಎಣ್ಣೆ ಹಚ್ಚಬೇಕು. ಚಂದ ಕಾಣುವಂತಿದ್ದರೆ ಒಳ್ಳೇ ಜಾಗದಲ್ಲಿ ಸಂಬಂಧ ಸಿಕ್ಕೀತು ಅನ್ನುವ ಭವಿಷ್ಯದ ಆಸೆಯಲ್ಲಿ ವರ್ತಮಾನವನ್ನು ಹೇಗೆಲ್ಲ ಜಗ್ಗಾಡಿ ಅಲಂಕಾರ ಮಾಡುವ ಒಡಲ ಮೋಹ. ಅವಳ ದೃಷ್ಟಿ ತಾನು ತಿಕ್ಕುವ ಪರಿಗೆ ಕುಲುಕಾಡುವ ಮಗಳ ಎದೆಯ ಮೇಲೆ ಹೋಯಿತು. ಸಿಗುವ ಸಾಧಾರಣ ಊಟ, ಶ್ರಮ, ಒತ್ತಡ ತುಂಬಿದ ಬದುಕು ಕೊಬ್ಬು ಸೇರಿಕೊಳ್ಳುವ ಯಾವ ಅವಕಾಶವನ್ನು ಕೊಡದಿದ್ದರೂ ವಸಂತಮಾಸಕ್ಕೆ ಕಲ್ಲಮೇಲಿನ ಹುಲ್ಲಿಗೂ ಹೂವರಳುವಂತೆ ಯೌವನ ಅವಳ ದೇಹಕ್ಕೆ ಸ್ವಲ್ಪ ಹೆಚ್ಚಿನ ಕೊಡುಗೆಯನ್ನೆ ಕೊಟ್ಟಿತ್ತು. 'ಕೊಬ್ರಿ ಜೋಡಿ ಕೂಡಿಸಿದ ಹಾಂಗವ... ಗುಡಿ ಬಾಗಲದ ಶಿಲಾಬಾಲ್ಕಿ ಹಂಗದಾಳ, ಶಿವ ಎಂತಾವ್ನ ಹಣೇಲಿ ಬರದಾನೋ!'